"ಏನು!! ನೀನು ಅದನ್ನು ಶರ್ಮಿಳಾಗೆ ಕೊಟ್ಟುಬಿಟ್ಟೆಯಾ?" ತಾಯಿ ಒಮ್ಮೆಲೇ ಪಟಾಕಿಯಂತೆ ಸಿಡಿದಳು. ಅದರ ಹಿಂದೆಯೇ ಎರಡನೆಯ ಪಟಾಕಿ ಕೂಡ ಸಿಡಿಯಿತು–

"ಮತ್ತೆ, ಅದನ್ನವಳು ತಿಂದುಬಿಟ್ಟಳಾ?''

"ತಿಂದರೇನಾಯ್ತುಮ್ಮ? ಅವಳು ನನ್ನ ಗೆಳತಿ..." ಇರ್ನ ದೃಢವಾದ ಮಾತುಗಳಲ್ಲಿ ಪ್ರತಿಕ್ರಿಯಿಸಿದಳು.

"ಪ್ರೀತಿಯ ಮಗಳೆ... ಅವಳೊಬ್ಬ ಹಿಂದೂ..."

"ಅವಳು ಹಿಂದೂ ಆದರೆ ಏನಾಯ್ತು? ಅವಳು ತರುವ ಪಲಾವನ್ನು ನಾನೂ ತಿನ್ನುತ್ತೇನೆ. ನಾವು ದಿನಾಲೂ ಹೀಗೆ ಒಬ್ಬರಿಗೊಬ್ಬರು ಹಂಚಿಕೊಂಡೇ ತಿನ್ನೋದು ಅಮ್ಮ..." ಇರ್ನ ಇನ್ನಷ್ಟು ಖಚಿತವಾಗಿ ಹೇಳಿದಳು.

"ಆದರೆ ಮಗಳೆ, ಹಿಂದೂಗಳು ಗೋಮಾಂಸವನ್ನು ತಿನ್ನೋದಿಲ್ಲ. ಗೋಮಾಂಸ ತಿಂದ ವಿಷಯವೇನಾದರೂ ಅವಳ ತಂದೆ ತಾಯಿಗೆ ಗೊತ್ತಾದರೆ, ಖಂಡಿತವಾಗಿ ಅವರು ನಿರಾಶರಾಗುತ್ತಾರೆ. ನೀನು ಮತ್ತು ಶರ್ಮಿಳಾ ಇಬ್ಬರೂ ಅವರಿಂದ ಬೈಯ್ಗುಳ ತಿನ್ನಬೇಕಾಗುತ್ತದೆ."

"ಆದರೆ?..."

ಇಷ್ಟು ನಡೆಯುವುದರೊಳಗೆ ಇರ್ನ ಇನ್ನೂ ಕೆರಳಿಬಿಟ್ಟಿದ್ದಳು. ಆದರೂ ತನ್ನನ್ನು ತಾನು ನಿಯಂತ್ರಿಸಿಕೊಳ್ಳುವ ಮನೋಭಾವ ಹೊಂದಿದ್ದ ಆಕೆ, "ಅಲ್ಲಮ್ಮ, ಅವಳು ಗೋಮಾಂಸದ ಬರ್ಗರ್ ತಿಂದರೆ ಏನು ಸಮಸ್ಯೆ?" ಎಂದು ಗಡುಸಾಗಿಯೇ ಪ್ರಶ್ನಿಸಿದಳು.

"ಅದು ಪಾಪ!!"

"ಅದು ಪಾಪವೆಂದಾದರೆ ಅವಳಿಗಾಯ್ತು; ಆದರೆ ನನಗಲ್ಲವಲ್ಲ?"

"ಕಾರಣವೇನೆಂದರೆ, ಅವರ ದೇವರು ಅವರಿಗೆ ಗೋಮಾಂಸವನ್ನು ತಿನ್ನಬೇಡಿರೆಂದು ಹೇಳಿದ್ದಾನೆ" –ತಾಯಿ, ಇರ್ನಗೆ ವಿವರಿಸಿದಳು.

"ಆದರೆ ಅಮ್ಮ, ದೇವರು ಒಬ್ಬನೇ ಎಂದು ನಮಗೆ ಕಲಿಸಿದ್ದಾರಲ್ಲ?"

ಈಗ ಅವಳ ತಾಯಿಗೆ ಎಲ್ಲಿಲ್ಲದ ಸಿಟ್ಟು "...ನನಗೇ ಉಪದೇಶ ಮಾಡ್ಲಿಕ್ಕೆ ಬರಬೇಡ. ನಿಮ್ಮ ತಂದೆ ಬಂದ ಮೇಲೆ ಎಲ್ಲಾ ಅವರನ್ನೇ ಕೇಳು" ದನಿ ಎತ್ತರಿಸಿದಳು.

ಗೋಮಾಂಸದ ಬರ್ಗರ್ ತಿಂದ ಕಾರಣಕ್ಕಾಗಿ ಶರ್ಮಿಳಾ ಪಾಪಿಯಾಗುತ್ತಾಳೆಂಬುದನ್ನು ಹಾಗೂ ಅದಕ್ಕಾಗಿ ಅವಳ ತಂದೆತಾಯಿ ಅವಳ ಮೇಲೆ ಕೋಪಗೊಳ್ಳುತ್ತಾರೆಂಬುದನ್ನು ತಿಳಿದ ಇರ್ನಗೆ ತುಂಬ ನಿರಾಶೆಯಾಯಿತು. ಈ ಘಟನೆಯ ಬಗೆಗೆ ತಂದೆಯವರು ಮನೆಗೆ ಬಂದ ಮೇಲೆ ವಿಚಾರಿಸಬೇಕೆಂದು ನಿರ್ಧರಿಸಿದ ಆಕೆ ತನ್ನ ಆ ದಿನದ ಹೋಂವರ್ಕ್ ಮಾಡ ತೊಡಗಿದಳು. ಓದಲೆಂದು ಪುಸ್ತಕದ ಚೀಲವನ್ನು ತೆಗೆದ ತಕ್ಷಣ ಮೊದಲು ಅವಳ ಕಣ್ಣಿಗೆ ಬಿದ್ದದ್ದು ನಾಲ್ಕೈದು ದಿನಗಳ ಹಿಂದೆ ಶರ್ಮಿಳಾ ತನಗೆ ಕೊಟ್ಟಿದ್ದ ಪುಸ್ತಕ. ಶರ್ಮಿಳಾ ಓದುವುದನ್ನು ತುಂಬ ಇಷ್ಟಪಡುತ್ತಿದ್ದಳು. ಅವಳ ತಂದೆ ಆಕೆಗೆ ಓದಲೆಂದು ನಿರಂತರ ಒಳ್ಳೊಳ್ಳೆಯ ಪುಸ್ತಕಗಳನ್ನು ತಂದುಕೊಡುತ್ತಿದ್ದರು. ಇರ್ನ ಕೂಡ ಓದುವುದನ್ನು ಇಷ್ಟಪಡುತ್ತಿದ್ದಳಾದರೂ ಅವಳು ಎನಿಡ್ ಬ್ಲೈಟನ್ ಮತ್ತು ಹ್ಯಾರಿ ಪಾಟರ್‌ನ ಪುಸ್ತಕಗಳ ಹೊರತಾಗಿ ಮತ್ತೇನನ್ನೂ ಓದಿರಲಿಲ್ಲ. ಕಳೆದ ವರ್ಷ ಎಂಟನೆಯ ತರಗತಿಯಲ್ಲಿದ್ದಾಗ ಅವಳು ಓದುವ ಹವ್ಯಾಸವನ್ನು ಬೆಳೆಸಿಕೊಂಡಳು. ಆಮೇಲೆ ಶರ್ಮಿಳಾಳ ಗೆಳೆತನ ಸಂಪಾದಿಸಿದ ನಂತರ